ವಿಷಯ: ಭಟ್ಕಳದಲ್ಲಿ 1993 ರಂದು ನಡೆದ ಕೊಲೆ

915 (1491)

ಶ್ರೀ ಶಿವಾನಂದ ನಾಯಕ (ಭಟ್ಕಳ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ 1993ರಂದು ನಡೆದ ಕೊಲೆ ಹಿನ್ನೆಲೆಯಲ್ಲಿ ರಚಿತವಾದ ನ್ಯಾಯಮೂರ್ತಿ ಜಗನ್ನಾಥಶೆಟ್ಟಿ ಆಯೋಗದ ವರದಿಯನ್ನು ಸರ್ಕಾರದವರು ಸದನದಲ್ಲಿ ಮಂಡಿಸದೇ ಇರಲು ಕಾರಣಗಳೇನು?

ಆ) ಈ ವರದಿಯನ್ನು ಯಾವಾಗ ಸದನದಲ್ಲಿ ಮಂಡಿಸಲಾಗುವುದು.

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ನ್ಯಾಯಮೂರ್ತಿ ಕೆ.ಜಗನ್ನಾಥಶೆಟ್ಟಿ ವಿಚಾರಣಾ ಆಯೋಗವು ವರದಿಯ 4 ಸಂಪುಟಗಳಲ್ಲಿ ನೀಡಿದೆ. ವರದಿಯು ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) ವರದಿಯನ್ನು ಕುರಿತು ಪರಿಶೀಲಿಸಲು ಇನ್ನೂ ಹೆಚ್ಚಿನ ಕಾಲಾವಕಾಶ ಬೇಕಾಗಿದೆ.

ವಿಷಯ: ರಾಜ್ಯದಲ್ಲಿರುವ ಜೈಲುಗಳ, ಖೈದಿಗಳ ಸಂಖ್ಯೆ

916 (1311)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಕಾರಾಗೃಹ,ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಜೈಲುಗಳ ಸಂಖ್ಯೆ ಎಷ್ಟು?

ಆ) ಸದರಿ ಜೈಲುಗಳಲ್ಲಿರುವ ಖೈದಿಗಳ ಒಟ್ಟು ಸಂಖ್ಯೆ ಎಷ್ಟು?

ಇ) ಶಿಕ್ಷೆಗೆ ಒಳಪಟ್ಟಿರುವ ಖೈದಿಗಳ ಸಂಖ್ಯೆ ಎಷ್ಟು?

ಈ) ವಿಚಾರಣೆಗೆ ಒಳಪಟ್ಟಿರುವ ಖೈದಿಗಳ ಸಂಖ್ಯೆ ಎಷ್ಟು?

ಉ) ಮಹಿಳಾ ಖೈದಿಗಳ ಸಂಖ್ಯೆ ಎಷ್ಟು?

ಶ್ರೀ ವಿ.ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು):

ಅ) 96.

ಆ) ದಿನಾಂಕ 31-03-98ಕ್ಕೆ 7572.

ಇ) 1336.

ಈ) 6236.

ಉ) ದಿನಾಂಕ 31-3-98ಕ್ಕೆ 232

ವಿಷಯ: ರಾಜ್ಯದಲ್ಲಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ

917 (1314)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಐಎಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ. ಅವರ ವೇತನ ಭತ್ಯೆ ಎಲ್ಲವೂ ಸೇರಿ ಮಾಹೆಯಾನ ಒಟ್ಟು ಐಎಎಸ್ ಅಧಿಕಾರಿಗೆ ಖರ್ಚಾಗುತ್ತಿರುವ ಹಣ ಎಷ್ಟು? (ವಿವರ ನೀಡುವುದು)

ಇ. ಪ್ರತಿಯೊಬ್ಬ ಅಧಿಕಾರಿಯು ಬಳಸುವ ಟೆಲಿಫೋನ್ ಖರ್ಚು ಎಷ್ಟು?

ಈ. ಪ್ರತಿಯೊಬ್ಬ ಐಎಎಸ್ ಅಧಿಕಾರಿಗೆ ಸರ್ಕಾರ ನೀಡುತ್ತಿರುವ ಸವಲತ್ತುಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿಗಳು):

ಅ. 256.

ಆ. ಐಎಎಸ್ ಅಧಿಕಾರಿಗಳ ವೇತನ ಶ್ರೇಣಿಗಳು ಹೊಂದಿಕೊಂಡಂತೆ ತುಟ್ಟಿ ಭತ್ಯೆದರ, ಮನೆ ಬಾಡಿಗೆ ಭತ್ಯೆ ದರ ಮತ್ತು ನಗರ ಪರಿಹಾರ ಭತ್ಯೆಗಳನ್ನು ಈ ಕೆಳಗೆ ಕೊಡಲಾಗಿದೆ.

ಹುದ್ದೆಯ ಹೆಸರು	ವೇತನ ಶ್ರೇಣಿ	ತುಟ್ಟಿ ಭತ್ಯೆ	ಮನೆ ಬಾಡಿಗೆ ಭತ್ಯೆ	ನಗರ ಪರಿಹಾರ ಭತ್ಯೆ
ಎಬೊವ್ ಸೂಪರ್ ಟೈಂ ಸ್ಕೇಲ್	26000 (ಫಿಕ್ಸ್‌ಡ್)	ವೇತನದ ಶೇ. 16	ವೇತನದ ಶೇ. 15	240